**ದಿಃ08.01.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 2 ಮತ್ತು 3ನೇ ಎದುರುದಾರರ ಪರ ಶ್ರೀ.ಎಂ.ಕೆ.ಟಿ ವಕೀಲರಿಂದ ಃ**

ನಾನು ಮೋಹನ್ ಭಂಡಾರಿ ಇವರ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಅಪಘಾತ ಸಂಭವಿಸಿದ ದಿನದಂದು ಸಹ ನಾನು ಸದರಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆ. ಅಪಘಾತ ವಿಚಾರವನ್ನು ಆ್ಯಂಬುಲೆನ್ಸ್ ಚಾಲಕ ಫೋನ್ ಮಾಡಿ ನನಗೆ ತಿಳಿಸಿದರು. ನಾನು ಅಪಘಾತವನ್ನು ಖುದ್ದು ನೋಡಿಲ್ಲ ಎಂದರೆ ಸರಿ. ಅಪಘಾತ ಸ್ಥಳ ಮಡಿಕೇರಿ ಮಂಗಳೂರು ರಸ್ತೆಯಲ್ಲಿ ಇದೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ಏರುಮುಖವಾಗಿದೆ ಎಂದರೆ ಸಾಕ್ಷಿ ಸ್ವಲ್ಪ ಏರುಮುಖವಾಗಿ ಇದೆ ಎನ್ನುತ್ತಾರೆ. ಏರುಮುಖವಾಗಿರುವ ರಸ್ತೆಯಲ್ಲಿ ಲೋಡ್ ಗಾಡಿಗಳು ವೇಗವಾಗಿ ಹೋಗಲು ಸಾಧ್ಯವಿಲ್ಲ ಎಂದರೆ ಸಾಕ್ಷಿ ಅಪಘಾತ ಸ್ಥಳದಲ್ಲಿ ರಸ್ತೆ ಅಷ್ಟೊಂಡು ಏರುಮುಖವಾಗಿಲ್ಲ ಎನ್ನುತ್ತಾರೆ. ಅಪಘಾತ ಪೂರ್ವದಲ್ಲಿ ನನ್ನ ಸಹೋದರ ಕೂಲಿ ಕೆಲಸ ಮಾಡುತ್ತಿದ್ದರು. ನನ್ನ ಸಹೋದರನಿಗೆ ಕೂಲಿ ವರಮಾನ ಹೊರೆತುಪಡಿಸಿ ಬೇರೆ ಆದಾಯದ ಮೂಲಗಳು ಇರಲಿಲ್ಲ. ನನ್ನ ಸಹೋದರ ದಿನಕೂಲಿ ಆಧಾರದ ಮೇಲೆ ಕೆಲಸ ಮಾಡುತ್ತಿದ್ದರು. ಮೃತ ನನ್ನ ಸಹೋದರನಿಗೆ ವಾಹನ ಚಾಲನೆ ಮಾಡಲು ಚಾಲನಾ ಪರವಾನಿಗೆ ಪತ್ರ ಇತ್ತು. ನನ್ನ ಸಹೋದರನಿಗೆ ವಾಹನ ಚಾಲನೆ ಮಾಡಲು

ಗೊತ್ತಿರಲಿಲ್ಲ ಅವರೇ ವಾಹನವನ್ನು ಕಾರಿಗೆ ಡಿಕ್ಕಿ ಪಡಿಸಿ ರಸ್ತೆಗೆ ಬಿದ್ದರು ಎಂದರೆ ಸರಿಯಲ್ಲ. ರಸ್ತೆಯಲ್ಲಿ ಬಿದಿದ್ದ ನನ್ನ ಸಹೋದರನ ತಲೆ ಲಾರಿಯ ಹಿಂಭದಿಯ ಚಕ್ರಕ್ಕೆ ಸಿಕ್ಕಿದ್ದರಿಂದ ಈ ಅಪಘಾತ ಸಂಭವಿಸಿದೆ ಎಂದರೆ ಸಾಕ್ಷಿ ಕಾರು ಚಾಲಕ ಯಾವುದೇ ಸೂಚನೆ ಕೊಡದೇ ಏಕಾಏಕಿ ಬ್ರೇಕ್ ಹಾಕಿದ್ದರಿಂದ ನನ್ನ ಸಹೋದರ ಕಾರಿನ ಹಿಂಭದಿಗೆ ಡಿಕ್ಕಿಹೊಡಿಸಿ ರಸ್ತೆಯ ಎಡಭಾಗಕ್ಕೆ ಬಿದ್ದಾಗ ಲಾರಿ ಚಕ್ರ ನನ್ನ ತಮ್ಮನ ಮೇಲೆ ಹತ್ತಿದೆ ಎನ್ನುತ್ತಾರೆ. ಈ ಅಪಘಾತಕ್ಕೆ ಲಾರಿ ಚಾಲಕನ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ಅಪಘಾತ ಪೂರ್ವದಲ್ಲಿ ನನ್ನ ಸಹೋದರನಿಗೆ ಪ್ರತಿದಿನ 800/- ರೂ ಕೂಲಿ ಇತ್ತು ಮತ್ತು ಆತ ಪ್ರತಿ ತಿಂಗಳು 20,800/- ಸಂಪಾಧನೆ ಮಾಡುತ್ತಿದ್ದ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ 2 ಮುತ್ತ 3ನೇ ಎದುರುದಾರರ ಯಾವುದೇ ಪರಿಹಾರ ಕೊಡಲು ಬಗಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಈ ಅಪಘಾತ ನನ್ನ ಸಹೋದರನ ತಪ್ಪಿನಿಂದಾಗಿ ಸಂಭವಿಸಿದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ.ಎನ್.ಎಸ್.ಎಸ್ ವಕೀಲರಿಂದ ಃ**

ನನ್ನ ಸಹೋದರ ಚಾಲನೆ ಮಾಡುತ್ತಿದ್ದ ಬೈಕ್ ನನ್ನ ಮಾಲೀಕತ್ವಕ್ಕೆ ಒಳಪಟ್ಟಿತ್ತು. ಸದರಿ ಬೈಕ್ ಹೋಂಡಾ ಆರ್ ನೆಟ್ ಕಂಪನಿಯದ್ದು ಆಗಿತ್ತು. ನನ್ನ ಸಹೋದರನಿಗೆ ಬೈಕ್ ಚಾಲನೆ ಮಾಡಲು ಚಾಲನಾ ಪರವಾನಿಗೆ ಪತ್ರ ಇತ್ತು. ನನ್ನ

ಸಹೋದರರನ ಚಾಲನಾ ಪರವಾನಿಗೆ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ. ಸಾಕ್ಷಿ ಮುಂದುವರೆದು ಅದು ಸಿಕ್ಕಿಲ್ಲ ಎನ್ನುತ್ತಾರೆ. ನನ್ನ ಸಹೋದರರನ ಚಾಲನಾ ಪರವಾನಿಗೆ ಪತ್ರವನ್ನು ನಾನು ನೋಡಿದ್ದೇನೆ. ಚಾಲನಾ ಪತ್ರವನ್ನು ಆರ್.ಟಿ.ಓ ಕಚೇರಿಯಿಂದ ಅರ್ಜಿ ಸಲ್ಲಿಸಿ ಪಡೆಯಬಹುದು ಎಂದರೆ ಸರಿ. ನಾನು ನನ್ನ ಸಹೋದರನಿಗೆ ಸೇರಿದ ಚಾಲನಾ ಪರವಾನಿಗೆ ಪತ್ರವನ್ನು ಸಬಂಧಪಟ್ಟ ಆರ್.ಟಿ.ಓ ಕಚೇರಿಯಿಂದ ಪಡೆಯುವ ಪ್ರಯತ್ನ ಮಾಡಿಲ್ಲ. ನನ್ನ ಸಹೋದರನಿಗೆ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಹಾಗಾಗಿ ಅದನ್ನು ನ್ಯಾಯಾಲಯದ ಮುಂದೆ ಹಾಜರು ಮಾಡುವ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ಚಾಲನಾ ಪರವಾನಿಗೆ ಪತ್ರ ಇಲ್ಲದವರಿಗೆ ನಾನು ನನ್ನ ಬೈಕನ್ನು ಚಾಲನೆ ಮಾಡಲು ಕೊಟ್ಟಿದ್ದೆ ಎಂದರೆ ಸರಿಯಲ್ಲ.

2. ಅಪಘಾತ ಕಾಲಕ್ಕೆ ಮೋಹನ್ ಭಂಡಾರಿ ಇವರ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಕೆಲಸ ಮಾಡುತ್ತಿದ್ದ ಸ್ಥಳದಿಂದ ಅಪಘಾತ ಸ್ಥಳ ಸುಮಾರು 10 ಕಿ.ಮಿ ದೂರದಲ್ಲಿ ಇದೆ. ಅಪಘಾತ ದಿನದಂದು ಬೆಳಿಗ್ಗೆ 7.00 ಗಂಟೆಗೆ ನನ್ನ ಸಹೋದರ ನನ್ನಿಂದ ಬೈಕ್ ತೆಗೆದುಕೊಂಡು ಹೋಗಿದ್ದ. ಆತ ಮದೆನಾಡು ಗ್ರಾಮಕ್ಕೆ ಕೆಲಸಕ್ಕೆ ಹೋಗುವ ಉದ್ದೇಶದಿಂದ ಬೈಕನ್ನು ತೆಗೆದುಕೊಂಡು ಹೋಗಿದ್ದ. ಅಪಘಾತ ವಿಚಾರ ನನಗೆ 3.00 ರಿಂದ 3.30 ಗಂಟೆಯ ಒಳಗೆ ತಿಳಿಯಿತು. ಅಪಘಾತ

ವಿಚಾರವನ್ನು ಆ್ಯಂಬುಲೆನ್ಸ್ ಚಾಲಕ ತಿಳಿಸಿದರು. ಸಾಕ್ಷಿ ಮುಂದುವರೆದು ಅವರ ಹೆಸರು ಗೊತ್ತಿಲ್ಲ ಎನ್ನುತ್ತಾರೆ. ಅಪಘಾತ ವಿಚಾರ ತಿಳಿದ ನಂತರ ನಾನು ಅಪಘಾತ ಸ್ಥಳಕ್ಕೆ ಹೋಗಿದ್ದೆ. ನಾನು ಅಪಘಾತ ಸ್ಥಳಕ್ಕೆ ಮಧ್ಯಾಹ್ನ 3.30 ಗಂಟೆಗೆ ಹೋಗಿದ್ದೆ. ಅಪಘಾತ ಸ್ಥಳದಲ್ಲಿ ಮಡಿಕೇರಿಯಿಂದ ಮಂಗಳೂರಿಗೆ ಹೋಗುವ ರಸ್ತೆ ಏರುಮುಖವಾಗಿದೆ ಎಂದರೆ ಸಾಕ್ಷಿ ರಸ್ತೆ ಸ್ವಲ್ಪ ಏರುಮುಖವಾಗಿದೆ ಎನ್ನುತ್ತಾರೆ. ಅಪಘಾತ ಸ್ಥಳದಲ್ಲಿ ರಸ್ತೆ ತಿರುವಿನಿಂದ ಕೂಡಿದೆ ಎಂದರೆ ಸ್ವಲ್ಪ ತಿರುವು ಇದ್ದು ಎದುರುಗಡೆ ಬರುತ್ತಿದ್ದ ವಾಹನ ಕಾಣಿಸುತ್ತದೆ ಎನ್ನುತ್ತಾರೆ. ನನ್ನ ತಮ್ಮ ಚಾಲನೆ ಮಾಡುತ್ತಿದ್ದ ಬೈಕ್ ಮೇಲೆ ಆತ ಒಬ್ಬನೇ ಇದ್ದ. ಅಪಘಾತ ಕಾಲಕ್ಕೆ ನನ್ನ ಸಹೋದರ ಮದೆನಾಡಿನಿಂದ ಮಡಿಕೇರಿ ಕಡೆ ಬರುತ್ತಿದ್ದ. ಕಾರು ಸಹ ಸುಳ್ಯ ಕಡೆಯಿಂದ ಮಡಿಕೇರಿ ಕಡೆ ಬರುತ್ತಿತ್ತು. ನಾನು ಅಪಘಾತವನ್ನು ಖುದ್ದು ನೋಡಿಲ್ಲ. ಸಾಕ್ಷಿ ಮುಂದುವರೆದು ಸ್ಥಳದಲ್ಲಿ ಇದ್ದ ಪ್ರವೀಣ್ ಈತ ಅಪಘಾತ ಹೇಗೆ ಸಂಭವಿಸಿದೆ ಎಂದು ತಿಳಿಸಿದರು ಎನ್ನುತ್ತಾರೆ. ಪ್ರವೀಣ್ ಈತ್ತ ನನಗೆ ಫೋನ್ ಕರೆ ಮಾಡಿ ಅಪಘಾತ ವಿಚಾರವನ್ನು ತಿಳಿಸಿಲ್ಲ. ಸಾಕ್ಷಿ ಮುಂದುವರೆದು ನಾನು ಸ್ಥಳಕ್ಕೆ ಹೋದಾಗ ಆತ ಅಪಘಾತ ವಿಚಾರನ್ನು ತಿಳಿಸಿದ ಎನ್ನುತ್ತಾರೆ. ಪ್ರವೀಣ್ ಈತ ಅಪಘಾತ ಸಂಬಂಧ ನನಗೆ ಮಾಹಿತಿ ಕೊಟ್ಟಿಲ್ಲ ಈ ಅರ್ಜಿಗಾಗಿ ಆ ರೀತಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರವೀಣ್ ಈತ ಅಪಘಾತ

ಕಾಲಕ್ಕೆ ಸ್ಥಳದಲ್ಲಿ ಇರಲಿಲ್ಲ ಮತ್ತು ಆತ ಅಪಘಾತವನ್ನು ಖುದ್ದು ನೋಡಿಲ್ಲ ಎಂದರೆ ಸರಿಯಲ್ಲ.

3. ನನ್ನ ಸಹೋದರ ಬೈಕನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ತನ್ನ ಮುಂದೆ ಹೋಗುತ್ತಿದ್ದ ಕಾರನ್ನು ಹಿಂದಿಕ್ಕಲು ಹೋಗಿ ಬೈಕನ್ನು ರಸ್ತೆ ಬಲಬಧಿಗೆ ತೆಗೆದುಕೊಂಡು ತಕ್ಷಣ ಎದುರುಗಡೆ ಲಾರಿ ಬರುತ್ತಿದ್ದನ್ನು ನೋಡಿ ಗಾಬರಿಗೊಂಡು ಬಿದ್ದ ಪರಿಣಾಮ ಲಾರಿ ಆತನ ಮೇಲೆ ಹರಿದಿದೆ ಎಂದರೆ ಸರಿಯಲ್ಲ. ಲಾರಿ ಬಲಬಧಿಯಲ್ಲಿ ಇರುವ ಮುಂದಿನಿಂದ ಎರಡನೇ ಚಕ್ರಕ್ಕೆ ನನ್ನ ಸಹೋದರ ಸಿಕ್ಕುಹಾಕಿಕೊಂಡು ತೀರಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಸಹೋದರ ಕಾರು ಏಕಾಏಕಿ ಬ್ರೇಕ್ ಹಾಕಿದ್ದರಿಂದ ಕಾರಿಗೆ ತಾಗಿ ರಸ್ತೆ ಮಧ್ಯೆಇದ್ದ ಬಿಳಿ ಪಟ್ಟೆಯ ಎಡಭಾಗಕ್ಕೆ ಬಿದಿದ್ದರಿಂದ ಲಾರಿ ಆತನ ಮೇಲೆ ಹತ್ತಿದೆ ಎನ್ನುತ್ತಾರೆ. ಲಾರಿ ಟೆಯರ್ ಗೆ ಬೈಕು ಹೊಡೆದ ರಭಸಕ್ಕೆ ಬೈಕು ಕಾರಿನ ಹಿಂಭದಿಗೆ ಚಿಮ್ಮಿಬಿತ್ತು ಎಂದರೆ ಸರಿಯಲ್ಲ. ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ಪೊಲೀಸರೊಂದಿಗೆ ಶಾಮೀಲು ಆಗಿ ನಾನು ಹೇಳಿದಂತೆ ಅಪಘಾತ ಸಂಭವಿಸಿದೆ ಎಂದು ಸುಳ್ಳು ಕಥೆ ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ನನ್ನ ಸಹೋದರ ಸಂಚಾರಿ ನಿಯಮಗಳನ್ನು ಉಲ್ಲಂಘನೆ ಮಾಡಿದ್ದ ಎಂದರೆ ಸರಿಯಲ್ಲ. ಆತ ಅಪಘಾತ ಕಾಲಕ್ಕೆ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ನನ್ನ

ಸಹೋದರನಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ನನ್ನ ಸಹೋದರ ಮದ್ಯಪಾನ ವಾಹನ ಚಾಲನೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ನನ್ನ ಸಹೋದರನಿಗೆ ಆಗಿದ್ದ ಅಪಘಾತಕ್ಕೂ ಮತ್ತು 1ಎದುರುದಾರನ ಕಾರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ನನಗೆ ಮಾಹಿತಿ ಇದ್ದರು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಹೋದರ ಅಪಘಾತ ಕಾಲಕ್ಕೆ ಕಾರಿನ ಹಿಂಭದಿ ಹೋಗುತ್ತಿದ್ದ ಮತ್ತು ಕಾರು ಚಾಲಕ ಏಕಾಏಕಿ ಯಾವುದೇ ಸೂಚನೆ ಕೊಡದೆ ಬ್ರೇಕ್ ಹಾಕಿದ ಹಾಗಾಗಿ ಈ ಅಪಘಾತ ಸಂಭವಿಸಿದೆ ಎಂದು ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸ್ಥಳದಲ್ಲಿ ರಸ್ತೆ ಸುಮಾರು 35 ರಿಂದ 45 ಅಡಿ ಅಗಲ ಇದೆ ಎಂದರೆ ಸರಿ. ಈ ಅಪಘಾತಕ್ಕೆ 1ನೇ ಎದುರುದಾರನ ಯಾವುದೇ ನಿರ್ಲಕ್ಷ ಕಾರಣ ಅಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4ನೇ ಎದುರುದಾರರ ಪರ ಶ್ರೀ.ಕೆ.ಡಿ.ಡಿ ವಕೀಲರಿಂದ ಃ**

ನನ್ನ ತಂದೆ ತಾಯಿಗೆ 4 ಜನ ಮಕ್ಕಳು. ನನ್ನ ಜೀವಂತ ಇರುವ ಸಹೋದರರು ಪ್ರಾಪ್ತ ವಯಸ್ಕರು. ನಾನು ಮೋಹನ್ ಭಂಡಾರಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಅವಿವಾಹಿತ. ನಾನು ದ್ವಿತೀಯ ಪಿ.ಯು.ಸಿ ವರೆಗೆ

ವ್ಯಾಸಂಗ ಮಾಡಿದ್ದೇನೆ. ನನ್ನ ಸಹೋದರ ಯೋಗಿತ್ ಈತ 9ನೇ ತರಗತಿಯವರಿಗೆ ವ್ಯಾಸಂಗ ಮಾಡಿದ್ದು ಆತ ಪ್ಲಬಿಂಗ್ ಕೆಲಸ ಮಾಡುತ್ತಿದ್ದಾನೆ. 4ನೇ ಅರ್ಜಿದಾರ ಮಡಿಕೇರಿಯ ಸ್ಮಾರ್ಟ್ ಬಜಾರ್ ನಲ್ಲಿ ಕೆಲಸ ಮಾಡುತ್ತಿದ್ದಾನೆ. ನಾನಾಗಲಿ ಅಥವಾ ಇತರ ಸಹೋದರರಾಗಲಿ ಮೃತ ನನ್ನ ಸಹೋದರನ ದುಡಿಮೆ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮೃತ ಸಹೋದರನ ವರಮಾನದ ಬಗ್ಗೆ ನ್ಯಾಯಾಲಯದ ಮುಂದೆ ದಾಖಲೆ ಹಾಜರು ಮಾಡಿದ್ದೇನೆ. ನನ್ನ ಮೃತ ಸಹೋದರ ಕರ್ನಾಟಕ ಬ್ಯಾಂಕ್ ಮಡಿಕೇರಿ ಶಾಖೆಯಲ್ಲಿ ಬ್ಯಾಂಕ್ ಖಾತೆ ಹೊಂದಿದ. ಬ್ಯಾಂಕ್ ಪಾಸ್ ಪುಸ್ತಕವನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿದರೆ ಆತನ ವರಮಾನದ ಬಗ್ಗೆ ತಿಳಿಯುತ್ತದೆ ಎಂದರೆ ಸಾಕ್ಷಿ ಆತನಿಗೆ ಕೂಲಿಯನ್ನು ಹಣದ ರೂಪದಲ್ಲಿ ನೇರವಾಗಿ ಕೊಡುತ್ತಿದ್ದರು ಎನ್ನುತ್ತಾರೆ. ನನ್ನ ಮೃತ ಸಹೋದರ ಅಪಘಾತ ಪೂರ್ವದಲ್ಲಿ 2-3 ವರ್ಷಗಳಿಂದ ನವೀನ್ ಇವರ ಬಳಿ ಕೆಲಸ ಮಾಡುತ್ತಿದ್ದ. ನಾನು ಆತ ಎಲ್ಲಿ ಮತ್ತು ಏನು ಕೆಲಸ ಮಾಡುತ್ತಿದ್ದ ಎಂದು ಖುದ್ದು ನೋಡಿಲ್ಲ. ಸಾಕ್ಷಿ ಮುಂದುವರೆದು ಆತ ನನ್ನ ಬಳಿ ನವೀನ್ ಬಳಿ ಕೆಲಸ ಮಾಡುತ್ತಿರುವುದಾಗಿ ಹೇಳಿದ್ದ ಎನ್ನುತ್ತಾರೆ. ಮೃತ ನನ್ನ ಸಹೋದರ ಮದೆನಾಡು ಗ್ರಾಮದ ನವೀನ್ ಈತನ ಬಳಿ ಕೆಲಸ ಮಾಡುತ್ತಿರಲಿಲ್ಲ ಮತ್ತು ಆತನಿಗೆ ಪ್ರತಿದಿನ 800/- ರೂ ಕೂಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ

ಪಡೆಯಬೇಕೆಂ ಉದ್ದೇಶದಿಂದ ಸುಳ್ಳು ದಾಖಲೆ ಸೃಷ್ಟಿಮಾಡಿ ನ್ಯಾಯಾಲಯದ ಮುಂದೆ ಹಾಜರು ಮಾಡಿ ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ 52 ವರ್ಷ ವಯಸ್ಸು. ಸದರಿಯವರು ಗೃಹಿಣಿ. ಮೃತ ನನ್ನ ಸಹೋದರ ದ್ವಿತೀಯ ಪಿ.ಯು.ಸಿ ವರೆಗೆ ವ್ಯಾಸಂಗ ಮಾಡಿದ್ದ. ಈ ಅಪಘಾತದಲ್ಲಿ ಕಾರು ನೋಂದಣಿ ಸಂಖೆ.ಕೆ.ಎ09ಸಿ2477 ಭಾಗಿ ಯಾಗಿಲ್ಲ ಎಂದರೆ ಸರಿಯಲ್ಲ. ಹಾಗಾಗಿ 4ನೇ ಎದುರುದಾರರ ಸಂಸ್ಥೆ ನಮಗೆ ಯಾವುದೇ ಪರಿಹಾರ ಕೊಡಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

ಉಳಿದ ಪಾಟಿ ಸವಾಲನ್ನು 1ನೇ ಎದುರುದಾರರ ಪರ ವಕೀಲರು ಮಾಡಲಾದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಪಾಟೀ ಸವಾಲುಃ 5ನೇ ಎದುರುದಾರರ ಪರ ಶ್ರೀ.ಎಂ.ಎಸ್.ಬಿ ವಕೀಲರಿಂದ ಃ**

ಅಪಘಾತ ಪೂರ್ವದಲ್ಲಿ ನನ್ನ ಮೃತ ತಮ್ಮ ನಿರುದ್ಯೋಗಿ ಎಂದರೆ ಸರಿಯಲ್ಲ. ಆತ ಎಲ್ಲಿಯೂ ಸಹ ಕೆಲಸಕ್ಕೆ ಹೋಗುತ್ತಿರಲಿಲ್ಲ ಮತ್ತು ಆತನಿಗೆ ಯಾವುದೇ ವರಮಾನ ಇರಲಿಲ್ಲ ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ಮೃತ ನನ್ನ ತಮ್ಮ ನಮ್ಮ ಕುಟುಂಬದವರ ಆದಾಯದಲ್ಲಿ ಬದುಕುತ್ತಿದ್ದ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ಅಪರಾಧ ವಿವರ ನಮೂನೆ ಮತ್ತು ಕಚ್ಚಾ ನಕಾಶೆಯ ಉಲ್ಲೇಖದ ಬಗ್ಗೆ ನನ್ನಿಂದ ಯಾವುದೇ

ತಕರಾರು ಇಲ್ಲ. ಈ ಅಪಘಾತಕ್ಕೆ ಲಾರಿ ಚಾಲಕನ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ನನ್ನ ಸಹೋದರ ತನ್ನಬೈಕನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಕಾರಿಗೆ ಡಿಕ್ಕಿ ಹೊಡೆಸಿದ್ದರಿಂದ ಈ ಅಪಘಾತ ಸಂಭವಿಸಿದೆ ಎಂದರೆ ಸರಿಯಲ್ಲ. ಈ ಅಪಘಾತ ನನ್ನ ಸಹೋದರನ ತಪ್ಪಿನಿಂದಾಗಿ ಸಂಭವಿಸಿದೆ ಎಂದರೆ ಸರಿಯಲ್ಲ. ಈ ಅಪಘಾತದಲ್ಲಿ ಲಾರಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ನಮಗೆ 5ನೇ ಎದುರುದಾರರ ಸಂಸ್ಥೆ ಯಾವುದೇ ಪರಿಹಾರ ಕೊಡಲು ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.